

ಕಗ್ಗದ ಪದ್ಯ ಕೂಡ ನಂಬಿಕೆಯನ್ನು ಕುರಿತು ಸೊಗಸಾಗಿ ಹೇಳಿದೆ. ಪ್ರಹ್ಲಾದನಿಗೆ ಎಲ್ಲೆಲ್ಲೂ ದೇವರಿದ್ದಾನೆ – ಎಂಬ ನಂಬಿಕೆ ಇದ್ದಿತು; ಈ ನಂಬಿಕೆಯ ದೆಸೆಯಿಂದಾಗಿಯೇ ಅವನು ಶಾಶ್ವತಪದವಿಯನ್ನು ಪಡೆದ. ಆದರೆ ಅವನ ತಂದೆಗೆ ಅಂಥ ವಿಶ್ವಾಸವಿರಲಿಲ್ಲ. ಹೀಗಾಗಿಯೇ ಅವನು 'ಕಂಬದಲ್ಲಿಯೂ ನಿನ್ನ ಹರಿ ಇದ್ದಾನೋ?' ಎಂದು ಕೆಣಕಿದ್ದು. ಕಂಬದಲ್ಲೂ ದೇವರು ಇರಬಹುದು – ಎಂಬುದರಲ್ಲಿ ಅವನಿಗೆ ನಂಬಿಕೆ ಇರಲಿಲ್ಲ. ಈ ಅಪನಂಬಿಕೆಯೇ ಅವನನ್ನು ಮೂರ್ಖನನ್ನಾಗಿಸಿತು; ಕೊನೆಗೆ ಸಾವನ್ನೂ ನೀಡಿತು.

ಕೆಲವೊಮ್ಮೆ ನಂಬಿಕೆ ಕೈಕೊಡುವುದೂ ಉಂಟೆನ್ನಿ! ಆದರೆ ಅಂಥ ಸಂದರ್ಭಗಳಲ್ಲೂ ನಾವು ನಂಬಿಕೆಯನ್ನು ಕಳೆದುಕೊಳ್ಳಬಾರದು. ನಂಬಿಕೆ ಎನ್ನುವುದು ಬಿಳಿಹಾಳೆಯಿದ್ದಂತೆ; ಅದರಲ್ಲಿ ಅಪನಂಬಿಕೆ ಎಂಬ ಕಪ್ಪುಚುಕ್ಕೆ ಮೂಡಿದರೆ ಹಾಳೆಯ ಬಿಳಿತನ ನಷ್ಟವಾದಂತೆಯೇ. ಮತ್ತೆ ಏನೂ ಮಾಡಿದರೂ ಮೊದಲಿನ ಬಿಳಿತನ ಅದಕ್ಕೆ ಒದಗದು. ಆದುದರಿಂದ ನಾವು ಯಾವುದರ ಬಗ್ಗೆಯಾದರೂ ನಂಬಿಕೆ ಇಡುವ ಮೊದಲೂ ಯೋಚಿಸಬೇಕು; ನಂಬಿಕೆಯನ್ನು ಕಳೆದುಕೊಳ್ಳುವ ಮೊದಲೂ ಯೋಚಿಸಬೇಕು.

ಆದರೆ ಒಟ್ಟು ಜೀವನದ ಬಗ್ಗೆಯೂ ಜಗತ್ತಿನ ಬಗ್ಗೆಯೂ ಎಂದಿಗೂ ನಾವು ನಂಬಿಕೆಯನ್ನು ಕಳೆದುಕೊಳ್ಳದ ಮಾನಸಿಕತೆಯನ್ನು ದಕ್ಕಿಸಿಕೊಳ್ಳಬೇಕು.

ಬದುಕು ಜಟಕಾಬಂಡಿ, ವಿಧಿಯದರ ಸಾಹೇಬ ।
ಕುದುರೆ ನೀನ್, ಅವನು ಪೇಳ್ದಂತೆ ಪಯಣಿಗರು ॥
ಮದುವೆಗೋ ಮಸಣಕೋ ಹೋಗೆಂದ ಕಡೆಗೋಡು ।
ಪದ ಕುಸಿಯೆ ನೆಲವಿಹುದು – ಮಂಕುತಿಮ್ಮ ॥

ಕಗ್ಗದ ಈ ಪದ್ಯ ಜೀವನದ ಬಗ್ಗೆ ನಮಗಿರಬೇಕಾದ ನಂಬಿಕೆಯನ್ನು ಗಟ್ಟಿಮಾಡುವಂಥದ್ದು. ಬಿದ್ದಾಗ ನಾವು ಸೋತೆವು ಎಂದು ಜೀವನದ ಬಗ್ಗೆಯೇ ನಂಬಿಕೆಯನ್ನು ಕಳೆದುಕೊಳ್ಳಬಾರದು. 'ನಾವು ಬಿದ್ದದ್ದು ನೆಲದ ಮೇಲೆ; ನೆಲ ನಮ್ಮನ್ನು ಹಿಡಿದೆತ್ತಿದೆ; ಮತ್ತಷ್ಟು ಆಳಕ್ಕೆ ಬೀಳದಂತೆ ಕಾಪಾಡಿದೆ' ಎಂಬ ವಿವೇಕದಿಂದ ಆಲೋಚಿಸಬೇಕು. ಬದುಕಿನಲ್ಲಿ ನಮ್ಮ ಯೋಚನೆಗೂ ಯೋಜನೆಗೂ ಮೀರಿ ಕೆಲವೊಂದು ಸಂಗತಿಗಳು ನಡೆಯುತ್ತಲೇ ಇರುತ್ತವೆ; ಆದರೆ ನಾವು ಆಗ ನಮ್ಮ ಕರ್ತವ್ಯದಿಂದ ವಿಮುಖರಾಗಬಾರದು. ಬದುಕಿನ ಬಗ್ಗೆ ನಂಬಿಕೆಯನ್ನು ಕಳೆದುಕೊಳ್ಳಬಾರದು. ಏಕೆಂದರೆ ಇನ್ನೂ ದೊಡ್ಡದಾದ ವಿಪತ್ತಿನಿಂದ ನಮ್ಮನ್ನು ಕಾಪಾಡುವುದಕ್ಕಾಗಿಯೇ ವಿಧಿ ಈಗ ಈ ಆಟವಾಡುತ್ತಿದೆ ಎಂದು ತಿಳಿಯಬೇಕು' ಎನ್ನುವುದು ಕಗ್ಗದ ಸಂದೇಶ.

(ಕತೆಗಳ ಹಲವು ಆಯಾಮ, ವಿಸ್ತಾರ ಪರಿಚಯಿಸಿದ ಈ ಅಂಕಣ ಇಲ್ಲಿಗೆ ಮುಕ್ತಾಯ)

*